# CSE CHRONICLES

A MONTHLY MAGAZINE

AN INITIATIVE BY FACE

# ಕನ್ನಡ



ISSUE
NOVEMBER 2022

/FACE_REVA

/FACE

REVA UNIVERSITY

FACE




# "ರೇವಾದಲ್ಲಿ ರಾರಾಜಿಸುತ್ತಿರುವ ಕನ್ನಡ"

ಕನ್ನಡ ಬರಿ ಭಾಷೆಯಲ್ಲ, ಇತಿಹಾಸದ ಪ್ರಾಚೀನತೆಯಿಂದ ವೈಶಿಷ್ಟ್ಯಗೊಂಡು ಕೆಚ್ಚೆದೆಯ ಕನ್ನಡಿಗರ ಹೃದಯದಿಂದ ಹೊರಹೊಮ್ಮುವ ಭಾವನೆ. ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡವು ವಚನ, ದಾಸರಪದ, ಜನಪದ ಸಾಹಿತ್ಯ, ದಲಿತ ಸಾಹಿತ್ಯ, ಕಾವ್ಯ, ಕಥೆ, ಕಾದಂಬರಿ, ನಾಟಕ, ವೈಜ್ಞಾನಿಕ ಗ್ರಂಥ, ಜೀವನ ಚರಿತ್ರೆ, ವಿಮರ್ಶೆ, ಉಲ್ಲೇಖ ಹೀಗೆ ಹತ್ತು ಹಲವು ಪ್ರಕಾರಗಳಿಂದ ಶ್ರೀಮಂತವಾಗಿದೆ. ಕನ್ನಡ ಸಾಹಿತ್ಯವು ಪ್ರಭಾವಶಾಲಿ ಆತ್ಮವಿಮರ್ಶೆಯ ಮಾಧ್ಯಮವಾಗಿ ಸ್ವತಂತ್ರವಾಗಿ ಬೆಳೆದು ವಿಜೃಂಭಿಸಿ ಮುಂದಿನ ಸಾಹಿತ್ಯ ಪರಂಪರೆಗಳ ಮೇಲೆ ಪ್ರಭಾವ ಬೀರಿ ವಿಶ್ವ ಸಾಹಿತ್ಯದಲ್ಲೂ ಒಂದು ಅವಿಭಾಜ್ಯ ಅಂಗವಾಗಿ ಉಳಿದಿದೆ.

ಕರ್ನಾಟಕದಲ್ಲಿಯೇ ಇದ್ದು "speak in English" ಎನ್ನುವ ಈ ಕಾಲದಲ್ಲಿ, ನಮ್ಮ ರೇವಾ ವಿಶ್ವವಿದ್ಯಾಲಯದಲ್ಲಿ ಇಂದಿಗೂ ಕನ್ನಡ ತಲೆಯೆತ್ತಿ ನಡೆಯುತ್ತಿದೆ ಎಂದರೆ ಅದರ ಸಂಪೂರ್ಣ ಕೀರ್ತಿಯು ಕುಲಪತಿಗಳಾದ ಡಾ.ಪಿ ಶ್ಯಾಮರಾಜು ಸರ್ ಅವರಿಗೆ ಸಲ್ಲತಕ್ಕದ್ದು. ಅವರು ಮೂಲತಃ ಆಂಧ್ರಪ್ರದೇಶದವರಾದರೂ ಸ್ವಚ್ಛ ಕನ್ನಡದಲ್ಲಿ ಅಚ್ಚುಕಟ್ಟಾಗಿ ಮಾತನಾಡುತ್ತಾರೆ ಹಾಗೂ ಕನ್ನಡ ಕಲಿಕೆಯನ್ನು ಪ್ರೋತ್ಸಾಹಿಸುತ್ತಾರೆ. ಇಲ್ಲಿನ ವಿದ್ಯಾರ್ಥಿಗಳಿಗೆ ಕನ್ನಡ ಕಲಿಯುವುದನ್ನು ಕಡ್ಡಾಯ ಮಾಡಿದ್ದು, ಪ್ರತಿ ವಿದ್ಯಾರ್ಥಿಗೂ ಶಿಕ್ಷಣಾವಧಿಯಲ್ಲಿ ಕನ್ನಡವನ್ನು ಪಠ್ಯಕ್ರಮದ ಒಂದು ವಿಷಯವಾಗಿ ಅಳವಡಿಸಲಾಗಿದೆ. ಕನ್ನಡೇತರ ವಿದ್ಯಾರ್ಥಿಗಳಿಗೆ ಕನ್ನಡ ಬಾರದೆಂಬ ಮುಜುಗರ ಕಾಡದ ಹಾಗೆ 'ಮೂಲ ಕನ್ನಡ' (basic ಕನ್ನಡ) ಎಂಬ ವಿಷಯ ಹಾಗೂ ಕನ್ನಡ ವಿದ್ಯಾರ್ಥಿಗಳಿಗೆ 'ಉನ್ನತ ಕನ್ನಡ' (advanced ಕನ್ನಡ) ಎಂದು ಎರಡು ಬೇರೆ ಬೇರೆ ವಿಭಾಗಗಳನ್ನಾಗಿ ವಿಂಗಡಿಸಿ ಕಲಿಕೆಗೆ ಅನುಕೂಲ ವ್ಯವಸ್ಥೆ ಮಾಡಲಾಗಿದೆ. ಕನ್ನಡ ಕಲಿಕೆ ಬರಿ ವಿದ್ಯಾರ್ಥಿಗಳಿಗಷ್ಟೇ ಸೀಮಿತವಾಗಿರದೇ, ಅಧ್ಯಾಪಕರು ಮತ್ತು ಬೋಧಕ ವರ್ಗದವರೂ ಕನ್ನಡ ಕಲಿಯಬೇಕೆಂದು ವಾರಾಂತ್ಯದಲ್ಲಿ ವಿಶೇಷ ಕನ್ನಡ ತರಬೇತಿ ನೀಡಲಾಗುತ್ತಿದೆ. ಅದಕ್ಕೆ ತಕ್ಕಂತೆ ಪ್ರತ್ಯೇಕ ಪಠ್ಯಕ್ರಮವಿದ್ದು, ಪರೀಕ್ಷೆಯನ್ನೂ ನಡೆಸಲಾಗುತ್ತಿದೆ.ಹಾಗೂ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ಸ್ಪರ್ಧೆಗಳನ್ನು ಆಯೋಜಿಸಿ ಅವರಲ್ಲಿರುವ ಸಾಹಿತ್ಯ ಕಲೆಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಗುತ್ತಿದೆ.

ಪ್ರತಿ ವರ್ಷ ರೇವಾದಲ್ಲಿ ಕನ್ನಡ ರಾಜ್ಯೋತ್ಸವವನ್ನು ಅತಿ ವಿಜೃಂಭಣೆಯಿಂದ ಆಚರಿಸುತ್ತಾರೆ. ೨೦೨೨ ರಲ್ಲಿ ನಡೆದ ೬೭ನೇ ಕನ್ನಡ ರಾಜ್ಯೋತ್ಸವದಂದು ಇಬ್ಬರು ನೇಪಾಳಿ ವಿದ್ಯಾರ್ಥಿನಿಯರು ಕನ್ನಡದ ನಿತ್ಯೋತ್ಸವ ಗೀತೆಯನ್ನು ಹಾಡಿ ಸಂಭ್ರಮಾಚರಣೆಗೆ ಇನ್ನಷ್ಟು ಮೆರಗು ನೀಡಿದರು.ಹೀಗೆ ರಾಜ್ಯ, ಪ್ರಾಂತ್ಯ, ವರ್ಣ, ವರ್ಗ ಎಂಬ ಬೇಧ-ಭಾವದ ಭ್ರಮೆಯನ್ನು ಸೀಳಿಕೊಂಡು ಕನ್ನಡತನ ಎಲ್ಲರನ್ನೂ ಒಂದುಗೂಡಿಸಿದೆ. ಹಾಗೆಯೇ ಜನವರಿ ೬, ೨೦೨೩ರಂದು ನಡೆದ ೧೫ನೇ ಸಂಸ್ಥಾಪಕರ ದಿನದಂದು( Founder's day) ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಾಲಿವುಡ್ ಖ್ಯಾತ ನಟ ಸೋನು ಸೂದ್ ರವರು "ಈ ವಿಶ್ವವಿದ್ಯಾಲಯದಲ್ಲಿ ಕನ್ನಡ ತರಗತಿ ಇದೆಯೇ? ಇದ್ದರೆ ನನ್ನನ್ನೂ ಸೇರಿಸಿಕೊಳ್ಳೀರಾ? " ಎಂದು ಕನ್ನಡ ಕಲಿಯುವ ಆಸಕ್ತಿಯನ್ನು ವ್ಯಕ್ತಪಡಿಸಿದರು. ಪ್ರಶಸ್ತಿ ಸ್ವೀಕರಿಸಿ ನಂತರ ಮಾತನಾಡಿದ ಅವರು "ಹೇಗಿದ್ದೀರಿ?" ಎಂದು ಕನ್ನಡದಲ್ಲಿ ಕುಶಲೋಪರಿ ವಿಚಾರಿಸಿದ್ದು ಸಂತಸದ ಸಂಗತಿ.

ಕಾಲಚಕ್ರದ ಮೋಡಿಗೆ ಸಿಲುಕಿ ತಾಯ್ನುಡಿಯ ಮಹತ್ವವನ್ನೇ ಅರಿಯದ ಕೆಲ ಜನರು ಕನ್ನಡವನ್ನು ಕೀಳಾಗಿ ನೋಡುತ್ತಿರುವ ಈ ಸಂದರ್ಭದಲ್ಲಿ ನಮ್ಮ ರೇವಾ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ನೀರೆರೆದು ಬೆಳೆಸಿ, ಬಳಸಿ ಕನ್ನಡದ ಕಂಪನ್ನು ಎಲ್ಲೆಡೆ ಪಸರಿಸಲಾಗುತ್ತಿದೆ. ಕನ್ನಡಕ್ಕಾಗಿ ದುಡಿಯುವ ಕೈಗಳು ಮುಂಬರುತ್ತಿದೆ.ರೇವಾದಲ್ಲಿ ಕನ್ನಡ ಬೆಳೆಯುತ್ತಿದೆ ಮತ್ತು ಬೆಳಗುತ್ತಿದೆ ಎಂಬುದು ಹೆಮ್ಮೆಯ ವಿಚಾರ. ಹೀಗೆಯೇ ಮುಂದೆಯೂ ರೇವಾ ಕುಟುಂಬದವರ ಕಣ-ಕಣದಲ್ಲೂ ಕನ್ನಡ ಹರಿದಾಡುವಂತಾಗಲಿ. ರೇವಾ ಶಿಖರದಲ್ಲಿ ಕನ್ನಡ ಬಾವುಟ ಮೆರೆಯುವಂತಾಗಲಿ..

"ಹಸಿರಾಗಲಿ ಕರ್ನಾಟಕ, ಉಸಿರಾಗಲಿ ಕನ್ನಡ"



**-ಶ್ರೇಯಾ ಜಿ ಹೆಗಡೆ**

R20EF433

6-H



# "ಅಪ್ಪು"

ಅಭಿಮಾನಿಗಳೇ ನಮ್ಮನೆ ದೇವರು ಎಂದವ,
ಅಭಿಮಾನಿಗಳಿಗೆ ಮನೆದೇವರಾಗುಳಿದವ.

ಎಲ್ಲರಿಗೂ ಸ್ಪೂರ್ತಿ, ನಾಡಿಗೆ ನೀ ಕೀರ್ತಿ
ಕೋಟಿ ಕೋಟಿ ಕನ್ನಡಿಗರ ಮನ ಗೆದ್ದ
ಕೋಟ್ಯಾಧಿಪತಿ

ಸರಳತೆಯ ಸರದಾರ, ನಗುವಿನ ಸಾಮ್ರಾಟ
ಕೊಡುವುದ ಬಲ್ಲವ, ಅನಾಥರ ಬಾಂಧವ

ಮೆಚ್ಚಿದರು ನಿನ್ನ ನಗು ಮೊಗವ,
ನೀ ಮೆಚ್ಚಿದೆ ಜನ ಸಹಾಯವ.


ಭುವಿಯ ಮೇಲೆಯೇ ಪರಮಾತ್ಮನಾದವನ,
ಬಹುಬೇಗ ಕರೆದುಕೊಂಡೆಯಾ ಪರಮಾತ್ಮ.



**-ಸಂಗಮೇಶ್ ಎನ್ ಮಠ್**
R19CS429
8-G



# ART Gallery






**ಬಿ. ಎಂ. ಪ್ರಜ್ವಲ್**

R21EF210

4-D




# "ಸೈಬರ್ ಅಪರಾಧ – ಎಂಬ ರಾಕ್ಷಸ"



-ಡಿಡೊನೇಹಲ್ ಎನ್ ಗೌಡ
R20EF035
6-A

ಮಾನವನು ಗಣಕ ಯಂತ್ರದ ಅನ್ವೇಷಣೆ ಮಾಡಿದ್ದೇ ಮಾಡಿದ್ದು ಅವನ ಜೀವನ ಶೈಲಿಯೇ ಬದಲಾಗಿಹೋಗಿದೆ. ಈ ಮೊದಲು ತನ್ನ ಕುಟುಂಬದೊಂದಿಗೆ ಕಾಲಕಳೆಯುತ್ತಿದ್ದವನು ಈಗ ತನ್ನ ಮೊಬೈಲ್ ಫೋನ್‌ನ ಜೊತೆ ಕಾಲಕಳೆಯುತ್ತಿದ್ದಾನೆ. ಅದನ್ನೇ ತನ್ನ ಜೀವನ ಸಂಗಾತಿಗಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಾನೆ. ಸಾಮಾಜಿಕ ಜಾಲತಾಣಗಳಲ್ಲಿ ತನ್ನ ಜೀವನದ ಪ್ರತಿಯೊಂದು ಕ್ಷಣಗಳನ್ನೂ ಹಂಚಿಕೊಳ್ಳುತ್ತಿದ್ದಾನೆ. ಇಲ್ಲೇ ಅವನು ತಪ್ಪು ಮಾಡುತ್ತಿದ್ದಾನೆ. ಏಕೆಂದರೆ "ಸೈಬರ್ ಅಪರಾಧ" ಎಂಬ ರಾಕ್ಷಸ ನಮ್ಮ ದೈನಂದಿನ ಚಟುವಟಿಕೆ, ನಡುವಳಿಕೆಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಗಮನಿಸುತ್ತಿದ್ದಾನೆ. ನಾವು ಗುಟ್ಟಾಗಿಟ್ಟುಕೊಳ್ಳಬೇಕಾದ ಎಲ್ಲಾ ವಿಷಯಗಳನ್ನೂ ಸುಲಭವಾಗಿ ನೋಡಿ, ನಮ್ಮ ನಿಶ್ಯಕ್ತಿಗಳನ್ನು, ಅವಿವೇಕತೆಗಳನ್ನು ತಿಳಿದುಕೊಂಡು, ಅದನ್ನೇ ಅಸ್ತವಾಗಿ ಬಳಸಿಕೊಂಡು ನಮ್ಮನ್ನು ಮೋಸಮಾಡುತ್ತಿದ್ದಾನೆ. ಯಾರಿಗೂ ಕಾಣದಂತೆ ಯಾವುದೋ ದೇಶದಲ್ಲಿ ಕುಳಿತುಕೊಂಡು ನಮ್ಮ ಹಣ, ಮಾನಮರ್ಯಾದೆ, ಮುಂತಾದವುಗಳನ್ನು ಕದಿಯುತ್ತಿದ್ದಾನೆ. ನಮ್ಮ ಜೀವನವನ್ನು ದುಸ್ತರವನ್ನಾಗಿಸುತ್ತಿದ್ದಾನೆ. ಈ ಸೈಬರ್ ಅಪರಾಧಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಲು ಇರುವ ಮಾರ್ಗಗಳೆಂದರೆ, ಯಾವುದೇ ಕಾರಣಕ್ಕೂ ಓಟಿಪಿಗಳನ್ನು ಅಪರಿಚಿತರೊಂದಿಗೆ ಹಂಚಿಕೊಳ್ಳಬಾರದು, ಬಹುಮಾನಗಳ ಆಮಿಶವೊಡ್ಡುವ ಅಪರಿಚಿತ ಲಿಂಕ್‌ಗಳನ್ನು ಒತ್ತಬಾರದು. ನಮ್ಮ ವೈಯಕ್ತಿಕ ಭಾವಚಿತ್ರಗಳನ್ನು ಜಾಲತಾಣಗಳಲ್ಲಿ ಹಂಚಿಕೊಳ್ಳಬಾರದು, ಮುಂತಾದವು.




# "ಅವ್ವ "

ನಾ ಮರೆತರೆ ತಾ ಮರೆವಳೇ
ತಾ ಕುಳಿತರೆ ನನ್ನ ನೆನೆಯದೇ ಇರುವಳೇ
ನಿಂತರೆ ಅದ್ರಶ್ಯದ ಅಲೆಯಾಗಿ ಬಂದು ನೀನ್ಯಾಕೆ ನಿಂತಿರುವೆ
ಕೂಸೆ ಎಂದು ಮುದ್ದಿಸದೆ ಇರುವಳೇ
ನನ್ನ ಮನ ಕಂಪಿಸಿದರೆ ಅವಳ ಮನ ತಲ್ಲಣಗೊಳ್ಳದೆ
ಇರುವದೇ
ನಾ ಕೊರಗಿದರೆ ಅವಳ ತನು ದುಃಖತಪ್ತಗೊಳ್ಳದೆ
ಇರುವುದೇ
ಕೈಬಿಡಲಾರಳು ಎಂದಿಗೂ ಈ ಮಗನ
ಮಗ ತಾ ತೊರೆದರು ಅವನಿಗೆ ಒಳ್ಳೆಯದನ್ನು ಆಶಿಸುವ
ನಿಸ್ವಾರ್ಥ ಜೀವ ಅವಳದು
"ಅವ್ವನಿಗೆ(ತಾಯಿ) ಸರಿಸಾಟಿಯಾದ ಮತ್ತೊಂದು ಅದ್ಭುತ
ಶಕ್ತಿ ಎಲ್ಲಿಯೂ ರೂಪಕಗೊಳ್ಳಲಾರದು ಈ ಇಡಿ
ಬ್ರಹ್ಮಾಂಡದಲ್ಲಿ"
ಮಿಗಿಲೂ ಈ ಅವ್ವ (ತಾಯಿ ) ಆ ಕಾಣದ ಮುಕ್ಕೋಟಿ
ದೈವಗಳಿಗಿಂತಲೂ
ಹೇಳುವೆ ಮತ್ತೆ ಹೇಳುವೆ ,ಮಗದೊಮ್ಮೆ ಹೇಳುವೆ,ನನ್ನ
ತಾಯಿ,ನನ್ನ ಹೆಮ್ಮೆ
ನನ್ನ ಜೀವನದ ಕಂಪನ,ನನ್ನ ಎದೆಯ ಪ್ರತಿ ಬಡಿತ
ಹೇಳುವದೊಂದೆ "ಅವ್ವ".




**-ಹನಮಂತ ಸುಭಾಸ ನಕ್ಕರಗುಂದಿ**
R20EF298
6-F

# ART *Gallery*






**ಸಿದ್ಧಾರ್ಥ್**
R20EF329
6-F

# "ಬದಲಾವಣೆ ಜಗದ ನಿಯಮ"

ಪ್ರತಿಯೊಬ್ಬ ಮನುಷ್ಯನಿಗೂ ಜೀವನದಲ್ಲಿ ಏನನ್ನಾದರು ಸಾಧಿಸಬೇಕೆಂಬ ಛಲ ಇದ್ದೇ ಇರುತ್ತದೆ. ಸಾಧನೆಯ ಹಾದಿ ಯಾವಾಗಲು ಹೂವಿನ ಹಾದಿಯಾಗಿರುವುದಿಲ್ಲ. ಅನೇಕ ಅಡ್ಡಿಗಳು ಆ ಸಾಧನೆಯ ಛಲಕ್ಕೆ ದಾಪುಗಾಲಿಡುತ್ತಾ ಬರುತ್ತದೆ. ಕಲ್ಲು-ಮುಳ್ಳಿನ ಹಾದಿಯ ಪಯಣ ಗಂಡು-ಹೆಣ್ಣು ಎಂಬ ಬೇಧವ ಕಂಡಿತೇ? ಅದೇಕೆ ಹೆಣ್ಣಿಗಷ್ಟೇ ತನ್ನ ಜೀವನವನ್ನು, ತನ್ನ ಜೀವನದ ನಿರ್ಧಾರಗಳನ್ನು ತೆಗೆದುಕೊಳ್ಳಲು ತಾನು ಸಮರ್ಥಳು ಎಂದು ಹೆಜ್ಜೆ ಹೆಜ್ಜೆಗೂ ನಿರೂಪಿಸಬೇಕಾಗಿರುವ ಅನಿವಾರ್ಯತೆ?.


ತಂದೆ ತಾಯಿಯ ಆಸೆಯ ಕೂಸಾಗಿ ಜನಿಸಿದ ಕಣ್ಮಣಿ. ಓದಿ ಬರೆದು, ಬೆಳೆದು ದೊಡ್ಡವಳಾಗಿ ನಿಂತಾಗ, ಹೆತ್ತವರ ಮನದಲ್ಲಿ ಒಂದೇ ತೊಳಲಾಟ:ನನ್ನ ಮಗಳನ್ನು ಒಂದು ಒಳ್ಳೆ ಹುಡುಗನಿಗೆ ಮದುವೆ ಮಾಡಿ ಕೊಟ್ಟರೆ ನನ್ನ ಜವಾಬ್ದಾರಿ ಕಳೆಯುತ್ತದೆ. ಇದು ಎಷ್ಟು ಸರಿ? ಈ ಯೋಚನೆಯನ್ನು ನಾವು ಬದಲಾಯಿಸಬಹುದೇ? ಈ ಶತಮಾನದಲ್ಲಿ ಹೆಣ್ಣು ಮಕ್ಕಳು ಮುಗಿಲು ಮೀರಿ ಸಾಧನೆಗೈದಿದ್ದಾರೆ. ಆದರೂ ಬಹು ಜನರ ಯೋಚನಾಲಹರಿ ಇದೇ ದಿಕ್ಕಿನಲ್ಲಿ ಸಾಗುತ್ತಿದೆ. ಹಾಗಾದರೆ ನಾವು ಎಲ್ಲಿ ಎದವುತ್ತಿದ್ದೇವೆ?.

ಮಗಳಾಗಿ, ಸಹೋದರಿಯಾಗಿ, ಮಡದಿಯಾಗಿ, ತಾಯಿಯಾಗಿ ಸಾಗುವ ಹೆಣ್ಣಿನ ಪಯಣದಲ್ಲಿ, ಅನೇಕ ಅಡ್ಡಿ ಆತಂಕಗಳು ಎದುರಾಗುತ್ತವೆ. ಬದಲಾವಣೆ ಜಗದ ನಿಯಮ.ಓದಿ ಬರೆದು, ತನ್ನ ಕಾಲ ಮೇಲೆ ತಾನು ನಿಂತು ಜಗತ್ತನ್ನು ಎದುರಿಸುವ ಆ ಶಕ್ತಿಗೆ, ಶಕ್ತಿಯನ್ನು ತುಂಬುವ ಜೀವ ಜೊತೆಯಾಗಬೇಕು. ತಾನು ಕಲಿತು, ಜಗತ್ತನ್ನೇ ಬೆಳಕಿನೆಡೆಗೆ ಸಾಗಿಸುವ ಆ ನಕ್ಷತ್ರಕ್ಕೆ, ಜೊತೆಯಾಗಿ ಸಾಗುವ ಚಂದಿರನಾಗಬೇಕು. ತನ್ನ ಗರ್ಭದೊಳೊಂದು ಜೀವವನ್ನು ಹೊತ್ತು, ಅದನ್ನು ಜಗತ್ತಿಗೆ ತರುವ ಆ ಜ್ಯೋತಿಗೆ ಜೊತೆಯಾಗುವ ಹಣತೆಯಾಗಬೇಕು. ಕತ್ತಲೆಯ ಜಗತ್ತಲ್ಲಿ, ಬೆಳಕಿನ ಕಿರಣದ ಹೊಂಬಿಸಿಲಾಗಬೇಕು. ಆಗಷ್ಟೆ ಜನರ ಅಭಿಪ್ರಾಯ ಬದಲಾಗುವುದು. ಇದೊಂದು ಸಣ್ಣ ಆಲೋಚನೆಯು ಬಹಳಷ್ಟು ಜನರ ಜೀವನದಲ್ಲಿ ಬಹುದೊಡ್ಡ ಬದಲಾವಣೆಯ ಪರ್ವವನ್ನೇ ತರುತ್ತದೆ. ನಾವೆಲ್ಲರೂ ಆ ಬದಲಾವಣೆಯ ಪರ್ವದ ಭಾಗವಾಗಬೇಕು.



**- ಬಿಂದುಶ್ರೀ ಡಿ ಸಿ**
ಸಹಾಯಕ ಪ್ರಾಧ್ಯಾಪಕರು,
ಸ್ಕೂಲ್ ಆಫ್ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್





# "ಪರಿಸರ"

ಸುಂದರ ಚೆಲುವಿನ ಚಿತ್ತಾರ
ಮನೋಲ್ಲಾಸವೀ ಪರಿಸರ

ಶಕ್ತಿ ಹೊತ್ತ ನೇಸರ ಅಜರಾಮರ
ಗಿಡ ಮರಗಳು ನೀಡುತ್ತಿವೆ ಊಟದ ಉಪಚಾರ
ಜುಳು-ಜುಳು ಹರಿಯುವ ನೀರಿನ ಝೇಂಕಾರ
ಮೆಲ್ಲನೆ ಬೀಸುವ ಗಾಳಿಯ ವೈಯಾರ

ಗಿಡಮರ, ವನ್ಯಜೀವಿಗಳ ಸಂಹಾರ
ನೆಲ ಜಲ ಗಾಳಿಗೆ ಹಾಹಾಕಾರ
ಅತಿ ಇಂಧನ ಬಳಕೆ ತಂದಿದೆ ಬರ
ಮಲಿನದಿಂದ ಭೂ ಮಂಡಲ ತತ್ತರ

ಮನುಜಕುಲಕೆ ಜಾಗೃತಿ ಮೂಡಿಸಿ
ಕಿಸೆ ತುಂಬುವ ದುರಾಸೆ ಬಿಡಿಸಿ
ಪ್ರಕೃತಿ ವಿಕೋಪ ತಣಿಸಿ
ಜಾಲತಾಣವನ್ನು ಸ್ವಚ್ಛಗೊಳಿಸಿ
ಗಿಡ ಮರ ಬೆಳೆಸಿ ಧರೆಯನು ಉಳಿಸಿ
ಪ್ರಕೃತಿಯ ಸುಖವನು ಅನುಭವಿಸಿ



-ಕೀರ್ತನ. ಆರ್
R22EH031
1-J



# "ಮಾಸಿ ಹೋಗದಿರಲಿ ಕನ್ನಡ"




-ಭವತಾರಿಣಿ ಎನ್

ಸಹಾಯಕ ಪ್ರಾಧ್ಯಾಪಕರು,
ಸ್ಕೂಲ್ ಆಫ್ ಕಂಪ್ಯೂಟರ್ ಸೈನ್ಸ್ ಮತ್ತು
ಇಂಜಿನಿಯರಿಂಗ್


> ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ

ಕಾಲ ಬದಲಾಗ್ತಾ ಇದೆ..
ಹೌದು ನಿಜ.. ಕಾಲ ತುಂಬ ಬೇಗನೆ ಬದಲಾಗ್ತಾ ಇದೆ..black and white TV ಇಂದ home theatre ಬಂದಾಯ್ತು...basic mobile set ಇಂದ touch screen, android, ipad ಆಯಿತು!! ಆಕಾಶವಾಣಿ ಮಾಸಿ ಹೋಗಿ , FM ಗೆ ರಂಗು ಬಂತು..!! chalkpiece, black board ಹೋಗಿ projector ಬಂತು!!!

ಹೀಗೆ ಎಷ್ಟೋ ವಸ್ತುಗಳು ಬದಲಾಗ್ತಾ ಇರೋ ಕಾಲದಲ್ಲಿ, ನಾವೆಷ್ಟು ಬದಲಾಗ್ತಾ ಇದೀವಿ ಅಂತ ಒಮ್ಮೆ ಆತ್ಮ ವಿಮರ್ಶೆ ಮಾಡ್ಕೊಬೇಕು!!

ವಿವಿಧ ಸಂಸ್ಕೃತಿಗಳ ಶ್ರೀಮಂತ ದೇಶ ಭಾರತದ, ಕಲೆಗಳ ಬೀಡಾದ ಕರ್ನಾಟಕದಲ್ಲಿ ನಾವಿದ್ದೇವೆ. ಕನ್ನಡ ನಮ್ಮ ಭಾಷೆ.. ಬದಲಾಗ್ತಾ ಇರೋ ಕಾಲದ ಚಕ್ರಕ್ಕೆ ಸಿಲುಕಿ, ಕನ್ನಡ ತನ್ನ ಕಳೆ ಕಳೆದುಕೊಳ್ತಾ ಇದೆ . ಪಾಶ್ಚಾತ್ಯರ ಅಂಧಾನುಕರಣೆ ಕೇವಲ ನಮ್ಮ ಉಡುಪು, ನಡೆ, ನುಡಿ,ಊಟ ಉಪಚಾರಗಳಿಗಷ್ಟೇ ಸೀಮಿತವಾಗಿರದೆ, ನಮ್ಮ ಭಾಷೆಗೂ ಕುತ್ತು ತಂದಿದೆ..


ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ, ಇಂದು ಎಷ್ಟು ಜನ ಕನ್ನಡ ಬಲ್ಲವರಿದ್ದಾರೋ..!! ಕನ್ನಡ ಗೊತ್ತಿದ್ದರೂ, ಗೊತ್ತಿಲ್ಲವೆಂಬಂತೆ ನಟಿಸಿ , ಆಂಗ್ಲ ಭಾಷೆಯ ಮೊರೆ ಹೋದವರು ಎಷ್ಟು ಜನರೋ !! ಬದಲಾಗುತ್ತಿರುವ ಕಾಲದ ಕೈಗೆ ನಮ್ಮ ಭಾಷೆಯ ಕೀಲಿ ಕೈ ಕೊಟ್ಟು ಮೌನವಾಗಿ ಅಂಧಾನುಕರಣೆ ಮಾಡುತ್ತಿರುವುದು ಸರಿಯೇ?!?

ನವೆಂಬರ್ ತಿಂಗಳಲ್ಲಿ ಬರುವ ಭಾಷಾಭಿಮಾನ ನಮ್ಮ-ನಿಮ್ಮ ಮನದಲ್ಲಿ ಎಂದೆಂದಿಗೂ ಯಾಕೆ ಮನೆ ಮಾಡುವುದಿಲ್ಲ?? english novel ಓದಬೇಕು ಅನ್ನೋ Craze, ಕನ್ನಡ ಕಾದಂಬರಿಗಳನ್ನ ಓದಬೇಕು ಅನ್ನೋ ತುಡಿತವನ್ನು ಯಾಕೆ ಕಡಿಮೆ ಮಾಡಿದೆ??

ಈಗಾಗಲೇ ಎಷ್ಟೋ ಭಾಷೆಗಳನ್ನ ಜನ ಉಪಯೋಗಿಸದೆ, ಆ ಭಾಷೆಗಳು ಮಾಸಿ ಹೋಗಿದೆ.. ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದೆ .. ಆ ಸ್ಥಿತಿ ನಮ್ಮ ಪ್ರೀತಿಯ ತಾಯ್ನುಡಿಗೆ ಬಾರದಿರಲಿ..ನಾವು ಬದಲಾಗಬೇಕು ನಿಜ.. ಆದರೆ ಆ ಬದಲಾವಣೆ ಭಾಷೆ - ಸಂಸ್ಕೃತಿಯಲ್ಲಾಗದೆ, ಭ್ರಷ್ಟಾಚಾರ, ಮೂಢ ನಂಬಿಕೆಗಳಲ್ಲಿ ಆಗಬೇಕು...

ATM ಉಪಯೋಗಿಸುವಾಗ, ಕನ್ನಡ ಭಾಷೆ ಆಯ್ದುಕೊಳ್ಳೋಣ .. ಮೊಬೈಲ್ ಅಲ್ಲಿ ಕನ್ನಡ ಅಕ್ಷರಗಳನ್ನ ಉಪಯೋಗಿಸೋಣ .. ಅಂತರ್ಜಾಲದಲ್ಲಿ ಆಂಗ್ಲ ಭಾಷೆ ಬಳಸುವ ಬದಲು ಆದಷ್ಟು ಕನ್ನಡವನ್ನು ಬಳಸೋಣ .. ಕನ್ನಡದ ಕವಿತೆ.. ಕಾದಂಬರಿ .. ಗ್ರಂಥಗಳನ್ನು ಓದೋಣ .. ಹೆಮ್ಮಯಿಂದ ಕನ್ನಡ ಮಾತನಾಡೋಣ..

ನಮ್ಮ ಕನ್ನಡ ಭಾಷೆಯನ್ನೂ ಪ್ರೀತಿಸೋಣ..



# "ಹೂವಿನ ಬಯಕೆ"



-ಝುರ್ನ ನಂಜೇ ಗೌಡ
R22EF087
1-G

ದೇವಾ.....
ಹೂವಿದು ಕಾದಿದೆ ನಿನ ಸೇವೆಗೆ
ದೇವಾ.....
ಮುಡಿಯುವೆಯಾ ತುಳಿಯುವೆಯಾ
ನಿನದಾಗಿದೆ ಸ್ವಾಮಿ ನಿದಾಗಿದೆ.. !!ಹೂ!!

ಭ್ರಮರದ ಬಯಕೆ
ರಸ ಹೀರುವುದು
ಮನುಜನ ಭ್ರಮೆಯೇ
ಸೌರಭ ಪಡೆವುದು
ಹೀನರ ಸೇವೆಗೆ ದೂಡುವೆಯಾ.......|2|
ಹೂವನು ಶಿರದಲಿ ಮುಡಿಯುವೆಯಾ.. |2|
ಹೂವಿದು ಕಾದಿದೆ ನಿನ ಸೇವೆಗೆ

ಕಲ್ಲಿನ ಶಿಲ್ಪಕೆ ಚೆಲ್ಲುವರೆನ್ನ
ಸಲ್ಲದ ಢಂಭಕೆ ಕೊಲ್ಲುವರೆನ್ನ
ಸಿರಿವಂತಿಕೆಯಾ ಬಯಸುವೆಯಾ...... [2]
ಗೌರೀಪ್ರಿಯನೇ ಮುಡಿಯುವೆಯ.....[2]
ಹೂವಿದು ಕಾದಿದೆ ನಿನ ಸೇವೆಗೆ

# "ರಾಧೆಯ ಕನಸು "



ನೇಸರನ ಕಿರಣಗಳು ಭುವಿಯ ಸ್ಪರ್ಶಿಸಿದಂತೆ,
ಅರಳುವ ಹೂವಿಗೆ ದುಂಬಿಯಂತೆ,
ಮುಂಜಾನೆಯ ಮಂಜಿನ ಹನಿಗಳು,
ಎಲೆಗೆ ಸೇರುತ್ತಿರಲು.....
ತಂಗಾಳಿಯು ಹಾಯಾಗಿ  ಬೀಸುತ್ತಿದೆ.

ಹರೆಯ ಹುರುಪಿನ ಹುಚ್ಚಾಟಕ್ಕೆ,
ತರುಣಿಯ ಮಾನವೊಂದು ಕರಗಿದೆ,
ಮನದ ಕಾಗದದಲ್ಲಿ ಬರೆದ ಸಾಲೊಂದು,
ಮುಗಿಲಲ್ಲಿ ರಂಗೇರುತ್ತ ಸಾಗಿದೆ,
ಅರಿವಿಲ್ಲದೆ ಜಾರಿತು ಮನವು
ಕೊಳಲನಾದಕ್ಕೆ......
ಮಾಧವನ  ಆಗಮನಕ್ಕಾಗಿ ಬಯಸುವ
ರಾಧೆಯು ಕನಸಿನ ರೂವಾರಿಯಂತೆ...!!

**-ಭಾರ್ಗವಿ ಮಠದ್**
R20EF400
6-H





# "ಅಪ್ಪ"

ಅಪ್ಪ ಎಂದರೆ ......
ಆಕಾಶವೇ ಏಕೆ?
ಉರಿವ ಸೂರ್ಯನಿಗೆ ಆಧಾರವೆಂದೇ
ಚುಕ್ಕಿ ಚಂದ್ರಮರ ತೊಟ್ಟಿಲೆಂದೇ
ಗಾಳಿ ಮೋಡಗಳ ತವರು ಮನೆಯೆಂದೇ
ಪ್ರಜ್ಞೆಯ ಪಂಚಮ ತತ್ವವೆಂದೇ?

ಒಲ್ಲೆ, ಒಲ್ಲೆ,
ಅಪ್ಪ ಎಂದರೆ.................
ಎಲ್ಲ ಇದ್ದರೂ ಯಾವುದಕ್ಕೂ ಅಂಟದ
ನಿರ್ಭಾವ ಖಾಲಿ ಖಾಲಿ ಆಕಾಶದ ಅವಕಾಶವಲ್ಲ;
ಅಪ್ಪ ಎಂದರೆ ಆಲದ ಮರ,
ಒಂದೊಂದು ಟೊಂಗೆಗೂ ಹಲವು ಬೇರು
ಒಂದೊಂದು ಬಿಳಲಿಗೂ ಹೊಸತೊಂದು ಚಿಗುರು

ನಾಳೆಯ ಹಾರು ಹಕ್ಕಿಗಳಿಗಿಂದು ಗೂಡು
ನಿಂತಲ್ಲಿಯೇ ಒರಗಿದ ಬಳ್ಳಿಗಳಿಗೆ ಸೂರು.
ಅದಕ್ಕಾಗಿಯೇ,

ಅಪ್ಪ ಎಂದರೆ ಬರಿಯ ಆಕಾಶವಲ್ಲ;
ಮೂಲ ಕಾಂಡ ಕಡೆದುರುಳಿದರೂ
ಸುತ್ತ ಬೇರಿಳಿಸುತ್ತಾ, ಹರಡುತ್ತಾ,
ಭೂಮ್ಯಾಗಸವನೆಲ್ಲಾ ಅಳೆಯುತ್ತಾ
ಅಳಿಯದೇ, ಬೆಳೆಯುತ್ತಲೇ ಇರುವ
ಊರ್ಧ್ವಮುಖಿ.....
ಅಗಾಧ - ಅಪರಿಮಿತ......
ಅನಂತ - ಅಶ್ವತ್ಥ........



**-ಡಾ. ಮೀನಾಕ್ಷಿ ಸುಂದರಂ**
ಅಸೋಸಿಯೇಟ್ ಪ್ರೊಫೆಸರ್
ಸ್ಕೂಲ್ ಆಫ್ ಕಂಪ್ಯೂಟರ್ ಸೈನ್ಸ್ ಮತ್ತು
ಇಂಜಿನಿಯರಿಂಗ್






**ಡಾ. ನಾಗಶ್ರೀ**

**ಸಹಾಯಕ ಪ್ರಾಧ್ಯಾಪಕರು,**

**ಸ್ಕೂಲ್ ಆಫ್ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್**

# "ಮಾಹಿತಿ ಭದ್ರತೆಯ ಪ್ರಾಮುಖ್ಯತೆ"




ಸವಾಲುಗಳು ಹೆಚ್ಚುತ್ತಿರುವ ಅಂತರ್ಸಂಪರ್ಕಿತ ಪರಿಸರದಲ್ಲಿ, ಮಾಹಿತಿಯು ಬೆಳೆಯುತ್ತಿರುವ ಸಂಖ್ಯೆ ಮತ್ತು ವಿವಿಧ ಅಪಾಯಗಳಿಗೆ ಒಡ್ಡಿಕೊಳ್ಳುತ್ತದೆ.

ದುರುದ್ದೇಶಪೂರಿತ ಕೋಡ್, ಕಂಪ್ಯೂಟರ್ ಹ್ಯಾಕಿಂಗ್ ಮತ್ತು ಸೇವೆಯ ನಿರಾಕರಣೆ ದಾಳಿಗಳಂತಹ ಬೆದರಿಕೆಗಳು ಹೆಚ್ಚು ಸಾಮಾನ್ಯವಾಗಿದೆ, ಮಹತ್ವಾಕಾಂಕ್ಷೆಯ ಮತ್ತು ಅತ್ಯಾಧುನಿಕವಾಗಿದೆ. ಸೂಕ್ತ ರಕ್ಷಣೆಗಳನ್ನು ಕಾರ್ಯಗತಗೊಳಿಸಲು ಮತ್ತು ನಿರ್ವಹಿಸಲು ಸಂಸ್ಥೆಗಳಿಗೆ ಇದು ಕಷ್ಟಕರವಾಗಿದೆ.

ನೀವು ಹೇಗೆ ಮುಂದೆ ಸಾಗುತ್ತೀರಿ?

ಒಂದು ಸಂಸ್ಥೆಯಲ್ಲಿ ಮಾಹಿತಿ ಭದ್ರತೆಯನ್ನು ಕಾರ್ಯಗತಗೊಳಿಸುವುದರಿಂದ ಆಂತರಿಕ ಮತ್ತು ಬಾಹ್ಯ ಬೆದರಿಕೆಗಳನ್ನು ತಡೆಗಟ್ಟುವ, ಪತ್ತೆಹಚ್ಚುವ ಮತ್ತು ಪ್ರತಿಕ್ರಿಯಿಸುವ ಮೂಲಕ ಅದು ಬಳಸುವ ತಂತ್ರಜ್ಞಾನ ಮತ್ತು ಮಾಹಿತಿ ಸ್ವತ್ತುಗಳನ್ನು ರಕ್ಷಿಸಬಹುದು.


ಸಂಸ್ಥೆಯ ಮಾಹಿತಿ ಭದ್ರತಾ ಕಾರ್ಯತಂತ್ರಕ್ಕೆ ಹಿರಿಯ ನಿರ್ವಹಣೆ ಮತ್ತು IT ಜವಾಬ್ದಾರರಾಗಿರುತ್ತಾರೆ. ಆದಾಗ್ಯೂ, ಸಣ್ಣ ಸಂಸ್ಥೆಗಳಲ್ಲಿ ಈ ಕೆಲಸವು ಅಪಾಯ ಮತ್ತು ಭದ್ರತೆ, ಡೇಟಾ ಮತ್ತು ಅನುಸರಣೆ, ಮತ್ತು IT ಮತ್ತು ಮಾಹಿತಿ ಭದ್ರತಾ ವ್ಯವಸ್ಥಾಪಕರು ಮತ್ತು ನಿರ್ದೇಶಕರು (ಕೆಲವೊಮ್ಮೆ ಇದು ಕೇವಲ ಒಬ್ಬ ವ್ಯಕ್ತಿ) ಜೊತೆಗೆ ಕುಳಿತುಕೊಳ್ಳುತ್ತದೆ.



**-ನಿಖಿಲ್ ಎಸ್ ತೆಂಗಲಿ**

ಸಹಾಯಕ ಪ್ರಾಧ್ಯಾಪಕರು,
ಸ್ಕೂಲ್ ಆಫ್ ಕಂಪ್ಯೂಟರ್ ಸೈನ್ಸ್ ಮತ್ತು
ಇಂಜಿನಿಯರಿಂಗ್





# "ತ್ಯಾಗಮಣಿ"

ಅಮ್ಮ ಎಂದರೆ ಏನು ಹೇಳಲಿ.... ಕೂಡಿದೆ ನಿಸ್ವಾರ್ಥ
ಮತ್ತು ತ್ಯಾಗದ ಪದದಲ್ಲಿ.

ಪ್ರಾಣ ಲೆಕ್ಕಿಸದೇ ಕೊಡುವಳು ಜನ್ಮ

ದೇವರಂತೆ ಮಾಡುವಳು ಕರ್ಮ

ಚಂದ್ರನ ಬೆಳಕಿನಲ್ಲಿ ಕೈ ತುತ್ತು ನೀಡುತ್ತಾ

ಮರೆತಳು ತನ್ನ ನೋವ ಕಂದನ ನೋಡುತ್ತಾ

ತನಗಾಗಿ ಕೇಳಿಲ್ಲ ಏನು ವರವ

ತ್ಯಾಗದಿ ಕರ್ಣನ ಮೀರಿಸುವ

ಮಹಾ ತ್ಯಾಗಮಣಿ ಇವಳು

ಮಗುವಿಗೆ ಪ್ರೀತಿ ಧೈರ್ಯದ ಸಂಕೇತ ಅಮ್ಮ



**-ಶಿವಕುಮಾರ್ ಆರ್**
R20EF325
6-F

# "ನಮ್ಮ ರೇವಾ"




ನಾವು ಹುಟ್ಟಿ ಬೆಳೆದ ಊರು, ಮನೆ ಇವು ನಮ್ಮ ಜೀವನದ ಕಟ್ಟಡದಲ್ಲಿ ಅಡಿಪಾಯವಾಗಿ ಮುಖ್ಯ ಪಾತ್ರ ವಹಿಸಿದರೆ, ನಾವು ಓದಿದ ಶಾಲೆ, ಕಾಲೇಜು ಮಾಳಿಗೆ ಏರಲು ಮೆಟ್ಟಿಲುಗಳಾಗಿ ಬಹುಮುಖ್ಯ ಪಾತ್ರ ವಹಿಸುತ್ತವೆ. ಈ ಮೆಟ್ಟಿಲುಗಳಲ್ಲಿ ಒಂದಾದ ನನ್ನ ಪದವಿ ಕಾಲೇಜು ರೇವಾ ವಿಶ್ವವಿದ್ಯಾಲಯದ ಬಗ್ಗೆ ನನ್ನ ಅನುಭವ.

ಎಲ್ಲರಂತೆಯೇ ನಾನು ನನಗೆ ರೇವಾ ಕಾಲೇಜು ಸಿಕ್ಕಿದ ವಿಷಯ ತಿಳಿದ ನಂತರ ಗೂಗಲ್ ನಲ್ಲಿ ರೇವಾ ಕಾಲೇಜಿನ ತುಂಬಾ ಎತ್ತರದ, ಮನಸೋಲುವ ಕಟ್ಟಡಗಳ ಭಾವಚಿತ್ರಗಳನ್ನು ನೋಡಿ, ಚನ್ನಾಗಿದೆ ಎನ್ನುವ ಅಭಿಪ್ರಾಯ ಹುಟ್ಟಿತಾದರೂ ರೇವಾ ಕಾಲೇಜಿನ ಗೇಟ್ ಇಂದ ಹತ್ತು ಹೆಜ್ಜೆ ಮುಂದಿಟ್ಟು ಬಲಕ್ಕೆ ಮುಖ ಮಾಡಿದ ನಂತರ ಹಸಿರಿನ ಮರ್ಮವೇನೋ ನನ್ನನ್ನು ಅಚ್ಚರಿಗೆ ನೂಕಿತು. ಈ ಟ್ರಾಫಿಕ್,ಮಾಲಿನ್ಯಗಳ ನಡುವೆ ಸ್ವಚ್ಛವಾದ ಗಾಳಿ ಸಿಕ್ಕಿತೆಂದು ಖುಷಿಯೂ ಆಯಿತು. ಸ್ವಚ್ಛತೆಯ ಬಗ್ಗೆ ಇನ್ನೊಂದು ಮಾತೆ ಇಲ್ಲ,15 ಸಾವಿರಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳನ್ನು ಹೊಂದಿರುವ ಈ ಕಾಲೇಜಿನಲ್ಲಿ ಒಂದು ಪ್ಲಾಸ್ಟಿಕ್-ಪೇಪರ್ ಇರದಂತೆ ಸ್ವಚ್ಛತೆಯನ್ನು ಕಾಪಾಡುವುದು ಅಷ್ಟು ಸುಲಭದ ಮಾತಲ್ಲ!.ನಂತರ ಕಾಲೇಜಿನಲ್ಲಿ ಕೇವಲ ಕ್ಲಾಸ್ ಕೇಳು ಎಕ್ಸಾಮ್ ಪಾಸ್ ಮಾಡ್ಕೋ ಪ್ಲೇಸ್ ಆಗು ಅಂತ ಅಷ್ಟೇ ಅಂದುಕೊಂಡ ನನಗೆ ಇಲ್ಲಿ ಒಂದು ವಿನೂತನ ಅನುಭವವಾಗಿದ್ದು ವಾಸ್ತವ.

ಸಮಯಕ್ಕೆ ಪ್ರಾಮುಖ್ಯತೆ ಕೊಡುವುದು ಇಲ್ಲಿ ಮುಖ್ಯವಾದ ಅಸ್ತ್ರ. ಐದು ನಿಮಿಷಗಳ ಅವಧಿಯನ್ನೂ ವ್ಯರ್ಥ ಮಾಡದಂತೆ ಜವಾಬ್ದಾರಿಯಿಂದ ತಮ್ಮ ಕರ್ತವ್ಯವನ್ನು ಚಾಚು ತಪ್ಪದೆ ಪಾಲಿಸುವ ಅಧ್ಯಾಪಕವೃಂದ .ವಿದ್ಯಾರ್ಥಿಗಳ ಮನಸ್ಥಿತಿ ಅವರ ಜೀವನದಲ್ಲಿ ದಿಕ್ಕು ತಪ್ಪಿದ ದೋಣಿಗಳ ಹಾಗೆ, ಅವರಿಗೆ ಸರಿಯಾದ ಮಾರ್ಗಸೂಚಿಸಿ, ಅವರ ಸಮಸ್ಯೆಗಳನ್ನು ತಿಳಿದುಕೊಂಡು ಸಲಹೆಗಳನ್ನು ಕೊಡಲು ವಿದ್ಯಾರ್ಥಿಗಳನ್ನು ಗುಂಪುಗಳಾಗಿ ಮಾಡಿ ಅವರಿಗೆ ಸರಿಯಾದ ವಾತಾವರಣ ಸೃಷ್ಟಿಸಿ ಕೊಡಲು ಉಪನ್ಯಾಸಕರು, ಉಪನ್ಯಾಸ ಮಾಡುವ ಜೊತೆಗೆ ಮೆಂಟರ್ಗಳಾಗಿ ವಿದ್ಯಾರ್ಥಿಗಳ ಏರು ಪೇರುಗಳನ್ನು ಗಮನಿಸುವುದರಲ್ಲಿ ಮೆಂಟರ್ಗಳ ಪಾತ್ರ ಸಿಂಹಪಾಲು.ಇನ್ನು ಕ್ಯಾಂಪಸ್ (campus)ನಲ್ಲಿ ನನಗಾದ ಆಭವವನ್ನು ಮಾತನಾಡಲು ಹೊರಟರೆ,ಭಾರತದ ಮೂಲೆ ಮೂಲೆಗಳಿಂದ ಗೂಡು ಬಿಟ್ಟ ಹಕ್ಕಿಗಳ ಹಾಗೆ ಇಲ್ಲಿ ಬಂದು ಸರಿಗಮ ಹಾಡುವ ವಿದ್ಯಾರ್ಥಿಗಳು, ವಿವಿಧ ಭಾಷೆಗಳನ್ನು ಯಾವುದೇ ಬೇದಭಾವವಿಲ್ಲದೆ ಮಾತನಾಡುತ್ತಾ ಎಲ್ಲಾ ಭಾಷೆಗಳನ್ನು ಗೌರವಿಸುವ ಭಾಷಾ ವೈವಿಧ್ಯತೆ ಹಾಗೂ ragging ಇಲ್ಲದೆ ಪರಸ್ಪರ ಹೊಂದಾಣಿಕೆ ಒಂದು ವಿಭಿನ್ನ ವಾತಾವರಣವೇ ಸರಿ.ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕನ್ನಡ ಕಾದಂಬರಿಗಳಿಂದ, ಪಿ. ಎಚ್. ಡಿ ಮಾಡಲು ಅವಶ್ಯವಿರುವ ಪುಸ್ತಕಗಳನ್ನು ಒಳಗೊಂಡ ಗ್ರಂಥಾಲಯ ನಮ್ಮ ಕಾಲೇಜಿನ ಆಕರ್ಷಣೆಯಾಗಿದೆ.ಇನ್ನು ಇಲ್ಲಿ ಹಮ್ಮಿಕೊಳ್ಳುವ ಸಾಂಸ್ಕೃತಿಕ ಚಟುವಟಿಗಳು ಮತ್ತು ಕಾರ್ಯಕ್ರಮಗಳು ವಿಭಿನ್ನ ಹಾಗೂ ವಿನೂತನ. ಭಾರತದ ಪ್ರತಿಯೊಂದು ಹಬ್ಬವನ್ನು ಆಚರಣೆ ಮಾಡುತ್ತಾರೆಂದರೆ ನೀವು ನಂಬಲೇಬೇಕು.



ವಿದ್ಯಾರ್ಥಿಗಳು ಯಾವ ಯಾವ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿರುವರೋ ಆ ಕ್ಷೇತ್ರಗಳಲ್ಲಿ ಪ್ರಬಲರಾಗುವಂತೆ ಪ್ರೋತ್ಸಾಹಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಪ್ರತಿಭೆಯನ್ನು ಗುರಿತಿಸುವ ಪರಿ ಅಪರೂಪವಾದರೂ ಇಲ್ಲಿ ಸರ್ವೇಸಾಮಾನ್ಯ.ಇನ್ನು ಇಲ್ಲಿ ಮುಂದುವರೆದ ತಂತ್ರಜ್ಞಾನದ ವಿಷಯವನ್ನು ಪ್ರಸ್ತಾಪಿಸುತ್ತಾ ಹೋದರೆ,ಮುಂದುವರೆದ ತಂತ್ರಜ್ಞಾನವು ಕೇವಲ ಮನುಜನ ಪೂರೈಯ್ಕೆಗಳಿಗೆ ಮಾತ್ರವಲ್ಲದೆ ಪ್ರಕೃತಿಯ ಮೇಲೆ ಒಲವು ತೋರಿಸುತ್ತಾ,"ಒಂದು ಮರವನ್ನು ಬೆಳೆಸಲು ಸಾಧ್ಯವಿಲ್ಲದಿದ್ದರೂ ಒಂದು ಮರವನ್ನು ಕಡಿಯುವುದು ಬೇಡ" ಎಂದು ಸಾರುತ್ತಾ ಪೇಪರ್ ಬಳಕೆ ಇಲ್ಲದೆ ಟ್ಯಾಬ್ಗಳಲ್ಲಿ ಪರೀಕ್ಷೆ ನಡಿಸುವುದು ನಮ್ಮ ಕಾಲೇಜಿನ ವಿಶೇಷ. ಹಾಗೂ 5G ಕಾಲಕ್ಕೆ ಹೊಂದಿಕೊಳ್ಳುವಂತೆ ಮುಂದುವರೆದ ತಂತ್ರಜ್ಞಾನದ ಬಳಕೆಯಿಂದ ಬ್ಲ್ಯಾಕ್ ಬೋರ್ಡ್ ಜೊತೆಗೆ ict tools, projectors ನ ಅಳವಡಿಕೆ, wifi, ಉನ್ನತ ಪ್ರಯೋಗಾಲಯದ ವ್ಯವಸ್ಥೆ ಮಾತ್ರವಲ್ಲದೆ,ಪದವಿ ಮುಗಿಸುವ ಮುನ್ನ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ ಎಲ್ಲಾ ವಿದ್ಯಾರ್ಥಿಗಳೂ placement ಆಗುವಂತೆ placement training ನೀಡುವರು. ಒಂದು ಒಳ್ಳೆಯ company ಅಲ್ಲಿ place ಆಗುವಂತೆ ವೇದಿಕೆಯನ್ನು ಕಲ್ಪಿಸಿಕೊಡುವಲ್ಲಿ ರೇವಾ ವಿಶ್ವವಿದ್ಯಾಲಯ ಮುಖ್ಯವಾದ ಪಾತ್ರ ಪಡೆದುಕೊಳ್ಳುವ ಜೊತೆಗೆ,ಕಲಿಕೆ ಎಂಬುದು ಕೇವಲ ನಾಲ್ಕು ಗೋಡೆಗಳ ಮಧ್ಯೆ ಸೀಮಿತವಾಗದೆ industrial visit ಎಂಬ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನಮಗೆ ಕೈಗಾರಿಕಾ ಭೇಟಿ ಕೊಡಿಸಿ practical knowledge ಕೊಡುವ ಹಾಗೂ out reach ಎಂಬ ಕಲ್ಪನೆಯೊಂದಿಗೆ 'ವನಮಹೋತ್ಸವ', 'ಅನಾಥಾಶ್ರಮ', 'ವೃದ್ಧಾಶ್ರಮ' ಭೇಟಿ ಕೊಡಿಸಿ ಸಮಾಜ ಕಾಳಜಿಯನ್ನು ಬಿತ್ತುವ ಮೂಲಕ ಎಲ್ಲಾ ವಿದ್ಯಾರ್ಥಿಗಳ ಹೃದಯದಕ್ಕೆ ಹತ್ತಿರವಾಗಿದೆ .ನಮ್ಮ ಕಾಲೇಜಿನ ಇನ್ನೊಂದು ಹೆಮ್ಮೆಯ ವಿಷಯವೆಂದರೆ ರೇವಾ ವಿಶ್ವವಿದ್ಯಾಲಯ ಒಂದು ಪ್ರೈವೇಟ್ ಕಾಲೇಜು ಆದರೂ ಕೆಲವೊಂದು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಆ ಶಾಲೆಗಳ ಜವಾಬ್ದಾರಿ ವಹಿಸಿಕೊಂಡು ಎಲ್ಲಾ ದಾನಗಳಿಗಿಂತ ವಿದ್ಯಾದಾನವೇ ಶ್ರೇಷ್ಠವೆಂಬುವ ಚಾಣಕ್ಯನ ಮಾತಿನಂತೆ ಸಹಸ್ರಾರು ವಿದ್ಯಾರ್ಥಿಗಳ ಜೀವನವನ್ನು ವೃದ್ಧಿಸುವ ಹೃದಯದವಂತಿಕೆ ಇಂದಿನ ಯುವ ಪೀಳಿಗೆಗೆ ಮಾದರಿಯಾಗಿದೆ.

ಮರವೊಂದು ಬಿಟ್ಟ ಕೆಲವೊಂದು ಹಣ್ಣುಗಳು ದೇವರ ಪೂಜೆಗೆ,ಇನ್ನು ಕೆಲವೊಂದು ಹಣ್ಣುಗಳು ತಿನ್ನುವುದಕ್ಕೆ, ಮತ್ತೆ ಕೆಲವೊಂದು ವಿದೇಶಕ್ಕೆ ಅವುಗಳ ಗಾತ್ರ, ಬಣ್ಣ, ರುಚಿಗೆ ಅನುಸಾರವಾಗಿ ತಲುಪಬೇಕಿರುವ ಜಾಗಕ್ಕೆ ತಲಪಿಸುವ ಮರ ರೇವಾ ವಿಶ್ವವಿದ್ಯಾಲಯವಾದರೆ, ಹಣ್ಣುಗಳಾಗಿ ವಿದ್ಯಾರ್ಥಿಗಳು ವಿಭಿನ್ನ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ .ಜ್ಞಾನ ಜ್ಯೋತಿಯಂತಿರುವ ಅದ್ಯಾಪಕವೃಂದ,ನನ್ನಂತಹ ಸಹಸ್ರಾರು ವಿದ್ಯಾರ್ಥಿಗಳಿಗೆ ಜ್ಞಾನವೆಂಬ ಬೆಳಕು ನೀಡುವ ಮೂಲಕ ರೇವಾ ವಿಶ್ವವಿದ್ಯಾಲಯ ಜ್ಞಾನದೇಗುಲವಾಗಿ ನೆಲೆನಿಂತಿದೆ.

ಇದು ನಮ್ಮ ಕಾಲೇಜು ನಮ್ಮ ರೇವಾ.
ಬೆಳಕು ಪಸರಿಸಲಿ ಹೀಗೆ, ಬಂದರೂ ಯಾವುದೆ ಅಡೆ -ತಡೆಗಳು.
ಬೆಳಕು ನೀಡುವ ದೀಪ ಬೆಳಗುತಿರಲಿ ಹೀಗೆ.
ದೀಪವಿರುವ ದೇಗುಲದ ಬೆಳಕು,ದಾರಿ ತೋರಲಿ.
ದೀಪವಿರುವ ದೇಗುಲದ ಬೆಳಕು, ದಾರಿದಿಪವಾಗಲಿ.



**-ಶ್ರೀಕಾಂತ್ ಜಿ**
**R20EF332**
**6-F**



# EDITORIAL PAGE

## EDITORS



*Prof.Bindushree*



*Prof.Bhavatarini N*



*Shreya*



*Srikanth G*

## MAGAZINE DESIGNERS



Mukesh M



Soujanya poojary



Ritvik

*EDITION-----*